**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.208/2022

**PW**. 1

**CW**. 4

**ಸಾಕ್ಷಿಯ ಹೆಸರು –ಶ್ವೇತ ಕೆ**

**ಗಂಡನ ಹೆಸರು –ಶನ್ಮುಖ ಕೆ**

**ವಯಸ್ಸು –27 ವರ್ಷಗಳು** ದಿನಾಂಕ 22–07–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವಿ ಎ ಓ , ಬೋಳನಹಳ್ಳಿ ವೃತ್ತ ,**

**ವಾಸಸ್ಥಳ –ಬೋಳನಹಳ್ಳಿ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ನಾನು ಜನವರಿ 2020 ರಿಂದ ಜನವರಿ 2021 ರವರೆಗೆ ಬಿಳಿಕೆರೆ ವೃತ್ತದ ವಿ ಎ ಓ ಆಗಿ ಸೇವೆ ಸಲ್ಲಿಸಿದ್ದೇನೆ.

ದಿಃ 05–05–2020 ರಂದು ಬಿಳಿಕೆರೆ ಪೊಲೀಸರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪಂಚನಾಮೆ ಮಾಡಲು ನನ್ನನ್ನು ಮತ್ತು ಚಾಸಾ–3 ರವರನ್ನು ಕರೆಸಿದ್ದರು. ನಾನವು ಪೊಲೀಸ್ ಠಾಣೆಗೆ ಹೋಗಿದ್ದು, ಪೊಲಿಸೀರು ಮಧ್ಯಾಹ್ನ 1.30 ಗಂಟೆಗೆ ಬಿಳಿಕೆರೆ ಗ್ರಾಮದ ನಾಯಕರ ಬೀದಿಗೆ ಕರೆದುಕೊಂಡು ಹೋಗಿ, ಚಾಸಾ–2 ರವರು ಸ್ಥಳ ತೋರಿಸಿದ ಮೇರೆಗೆ ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆ ಮಾಡಿ, ಚಾಸಾ–1 ರವರು ಧರಿಸಿದ್ದ ರಕ್ತಸಿಕ್ಕ ಒಂದು ಶರ್ಟ, ಒಂದು ಪ್ಯಾಂಟ್ ಹಾಗೂ ಅಂಡರ್ವೇರ ಗಳನ್ನು ಚಾಸಾ–2 ರವರು ಹಾಜರು ಮಾಡಿದ್ದು, ಪೊಲೀಸರು ಅವುಗಳನ್ನು ಜಪ್ತಿ ಮಾಡಿದರು. ಸದರಿ ಪಂಚನಾಮೆಗೆ ನಾನು, ಚಾಸಾ–3 ಹಾಗೂ ಹರೀಶ ರವರು ಸಹಿ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–1 ಹಾಗೂ

ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಕಾಲಕ್ಕೆ ಜಪ್ತಿ ಮಾಡಿದ ರಕ್ತಸಿಕ್ಕ ಒಂದು ಶರ್ಟ, ಒಂದು ಪ್ಯಾಂಟ್ ಹಾಗೂ ಅಂಡರ್ವೇರ ಗಳನ್ನು ಈಗ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ, ಅವುಗಳನ್ನು ಮು.ಮಾ-1 ರಿಂದ 3 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ- ಆರೋಪಿ ಪರ ಶ್ರೀ ಸಿ ಎಸ್ ವಕೀಲರಿಂದಃ-**

ಕೃತ್ಯ ನಡೆದ ಸ್ಥಳದ ಅಕ್ಕಪಕ್ಕದಲ್ಲಿ ವಾಸದ ಮನೆಗಳು ಇವೆ ಎಂದರೆ ಸರಿ. ಪಂಚನಾಮೆಗೆ ಬರಲು ಪೊಲೀಸರು ನೋಟೀಸ್ ನೀಡಿದ್ದರು ಎಂದರೆ ಸರಿ. ಕೃತ್ಯ ನಡೆದ ಸ್ಥಳದಲ್ಲಿ ಮಳೆ ಬಂದಿದ್ದ ಕಾರಣ ರಕ್ತದ ಕಲೆಗಳು ಇರಲಿಲ್ಲ. ಮು.ಮಾ-1 ರಿಂದ 3 ರ ಮೇಲೆ ನಮ್ಮ ಸಹಿ ಪಡೆದು ಚೀಟಿ ಅಂಟಿಸಿಲ್ಲ ಎಂದರೆ ಸರಿ . ನಿಪಿ-1 ರ ಪಂಚನಾಮೆ ಕಾಲಕ್ಕೆ ನಾನು ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನೀಪಿ-1 ರಂತೆ ಪಂಚನಾಮೆ ಮಾಡಿಲ್ಲ ಹಾಗೂ ಮು.ಮಾ-1 ರಿಂದ 3 ಗಳನ್ನು ಜಪ್ತಿ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲಿಸೀರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.